## ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ

೧೭೫೨. ಶ್ರೀ ಎಂ. ಶಿವಣ್ಣ (ಎಚ್. ಡಿ. ಕೋಟೆ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ೩ ವರ್ಷಗಳಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮಕ್ಕೆ ಒದಗಿಸಿರುವ ಹಣದ ವಿವರ ಮತ್ತವೆಷ್ಟು ? (ಪ್ರತಿ ವರ್ಷದ ವಿವರ ನೀಡುವುದು)

ಆ) ಯಾವ ಉದ್ದೇಶಗಳಿಗಾಗಿ ಮತ್ತು ಇದುವರೆವಿಗೆ ಜನರಿಗೆ ಕಲ್ಪಿಸಲಾಗಿರುವ ಸೌಲಭ್ಯಗಳಾವುವು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

| | ವರ್ಷ | ಮೊತ್ತ |
|---|---|---|
| ಅ) | ೧೯೮೫-೮೬ | ೫,೦೯,೭೨,೫೦೦-೦೦ |
| | ೧೯೮೬-೮೭ | ೭,೪೮,೪೩,೭೫೦-೦೦ |
| | ೧೯೮೭-೮೮ | ೬,೭೮,೫೬,೫೦೦-೦೦ |
| | ಒಟ್ಟು | ೧೯,೩೬,೭೨,೭೫೦-೦೦ |

ಆ) ೧) ಶೇ. ೨೫ ಸಹಾಯಧನ ಮತ್ತು ಬೀಜಧನ ಸಾಲದ ಯೋಜನೆಯಲ್ಲಿ ಕೃಷಿ, ನೀರಾವರಿ, ಎತ್ತು ಮತ್ತು ಬಂಡಿ, ಹೈನುಗಾರಿಕೆ, ತೋಟಗಾರಿಕೆ, ಗ್ರಾಮೀಣ ಕೈಗಾರಿಕೆ, ಸಣ್ಣ ವ್ಯಾಪಾರ ಮತ್ತು ಆಟೋರಿಕ್ಷಾಗಳಿಗೆ ಸಹಾಯ ಒದಗಿಸಲಾಗಿದೆ.

೨) ವಿಶೇಷ ಘಟಕ ಯೋಜನೆಯಲ್ಲಿ ನೀರಾವರಿ ಕೊಳವೆ ಬಾವಿ ಯೋಜನೆಗೆ ಸಹಾಯ ಮಾಡಲಾಗಿದೆ.

೩) ಸಣ್ಣ ಕೃಷಿ ಕಾರ್ಮಿಕರಿಗೆ ಕೃಷಿ ಉಪಕರಣಗಳನ್ನು ಉಚಿತವಾಗಿ ಹಂಚಲಾಗಿರುತ್ತದೆ.

ಶ್ರೀ ಎಂ. ಶಿವಣ್ಣ.—ಈ ಅಭಿವೃದ್ಧಿ ನಿಗಮದಿಂದ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಸಾಲ ಸೌಲಭ್ಯವನ್ನು ನೀಡತಕ್ಕ ಸಂದರ್ಭದಲ್ಲಿ ಅವರುಗಳು ಹಾಕತಕ್ಕಂಥ ಅರ್ಜಿಗಳನ್ನು ಬ್ಯಾಂಕ್‌ಗಳಿಗೆ ಕಳುಹಿಸಿಕೊಡುವಂತಹ ವ್ಯವಸ್ಥೆ ಇದೆ. ಇವರು ಶೇಕಡ ೨೫ ರಷ್ಟು ಹಣವನ್ನು ಕೊಟ್ಟು ಉಳಿದ ಹಣಕ್ಕೆ ಬ್ಯಾಂಕ್‌ಗಳಿಗೆ ಅವರ ಅರ್ಜಿಗಳನ್ನು ಕಳಿಹಿಸಿಕೊಡತಕ್ಕಂಥ ಸಂದರ್ಭದಲ್ಲಿ ಸುಮಾರು ೯೦ ಭಾಗ ಅರ್ಜಿಗಳನ್ನು ರಿಜೆಕ್ಟ್ ಮಾಡಿ ಕಳುಹಿಸುತ್ತಾರೆ. ನನ್ನ ದೃಷ್ಟಿ ಇಷ್ಟೇ. ಕಳುಹಿಸಿಕೊಡತಕ್ಕಂಥ ಅರ್ಜಿಗಳನ್ನು ನಿಗಮದಿಂದ ಅವರ ಟಾರ್ಗೆಟ್ ಎಷ್ಟು ಇದೆ ಅಷ್ಟನ್ನು ಸಂಗ್ರಹಿಸಿ ಕಳುಹಿಸುವ ವ್ಯವಸ್ಥೆ ಆಗಬೇಕು. ಬ್ಯಾಂಕ್‌ನವರುಗಳಿಗೆ ಕಳುಹಿಸಿಕೊಡತಕ್ಕಂಥ ವ್ಯವಸ್ಥೆಯಲ್ಲಿ ಇವರು ೨೫ ಭಾಗ ಕೊಟ್ಟಿದ್ದಾರೆ ಉಳಿದುದಕ್ಕೆ ನಮ್ಮ ಜವಾಬ್ದಾರಿ ಇಲ್ಲವೆಂದು ಯೋಚನೆ ಮಾಡಿ ಕೈಕಟ್ಟಿ ಕುಳಿತುಕೊಳ್ಳುತ್ತಾರೆ ಈ ರೀತಿ ಆಗಬಾರದು. ಸಾಕಷ್ಟು ಅರ್ಜಿಗಳನ್ನು ಕಳುಹಿಸಿಕೊಡುವಾಗ ಸರಿಯಾದ ರೀತಿಯಲ್ಲಿ ಕಳುಹಿಸಿಕೊಟ್ಟು, ಅಷ್ಟಕ್ಕೂ ಮಂಜೂರು ಆಗತಕ್ಕಂಥ ವ್ಯವಸ್ಥೆ ಆಗಬೇಕು. ನಿಗಮದಿಂದ ಕೈಗಾರಿಕೆಗಳನ್ನು ಪ್ರಾರಂಭ ಮಾಡಿದ್ದೇವೆಂದು ಹೇಳಿದ್ದಾರೆ ಯಾವ ಯಾವ ಕೈಗಾರಿಕೆಗಳನ್ನು ನಿಗಮದಿಂದ ಮಾಡಿದ್ದಾರೆ. ಅವು ಯಾವರೀತಿ ಅಭಿವೃದ್ಧಿಹೊಂದುತ್ತವೆ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

ಅಧ್ಯಕ್ಷರು.—ಅವರು ಉತ್ತರ ಕೊಡಲಿ, ಮತ್ತೊಂದು ಅವಕಾಶ ಕೊಡುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ. ಅಧ್ಯಕ್ಷರೆ, ಪರಿಶಿಷ್ಟ ಜಾತಿ, ಹಾಗೂ ವರ್ಗದವರ ಅಭಿವೃದ್ಧಿ ನಿಗಮ, ಪರಿಶಿಷ್ಟ ಜಾತಿ ಮತ್ತು ವರ್ಗದವರನ್ನು ಬಡತನ ರೇಖೆಯಿಂದ ಮೇಲಕ್ಕೆ ಎತ್ತತಕ್ಕಂಥ ಕಾರ್ಯಕ್ರಮ ಇದು ಒಂದು ಅತ್ಯಂತ ಪ್ರಮುಖವಾದುದು. ಮೊದಲು ಬರೀ ಬೀಜ ಧನಕ್ಕೆ ೨೫ ಪರ್ಸೆಂಟ್ ನಾವು ಕೊಡುತ್ತೇವೆ. ಬ್ಯಾಂಕ್‌ನಿಂದ ೭೫ ಪರ್ಸೆಂಟ್ ಕೊಡುತ್ತಾರೆ. ನೂರಕ್ಕೆ ನೂರು ಭಾಗ ಸಾಲದರೂಪದಲ್ಲಿ

ಕೊಡತಕ್ಕ ಕಾರ್ಯಕ್ರಮ ಇತ್ತು. ೩೧-೧೨-೮೬ ರಿಂದ ಬ್ಯಾಂಕ್‌ನಿಂದ ಬೀಜಧನ ಯೋಜನೆಯಲ್ಲಿ ಸಹಾಯಧನ ಯೋಜನೆಯೆಂದು ೨೫ ಪರ್ಸೆಂಟ್, ಸಹಾಯ ಧನದಲ್ಲಿ ೨೫ ಪರ್ಸೆಂಟ್ ಬೀಜಧನ ೫೦ ಪರ್ಸೆಂಟ್ ಬ್ಯಾಂಕ್‌ನವರು ಕೊಡತಕ್ಕದ್ದು ಎಂದು ಈ ಕಾರ್ಯಕ್ರಮವನ್ನು ನಾವು ಜಾರಿಗೆ ತಂದಿದ್ದೇವೆ. ಈ ಕಾರ್ಯಕ್ರಮ ಜಾರಿಗೆ ತಂದ ಮೇಲೆ ೧-೧-೮೬ ರಿಂದ ಶೇಕಡ ೨೫ ರಷ್ಟು ಸಹಾಯ ಧನ, ಮತ್ತು ಬೀಜ ಧನ, ಯೋಜನೆಯಲ್ಲಿ ಇಲ್ಲಿಯವರೆಗೆ ಒಟ್ಟು ೨೯,೩೮೮ ಫಲಾನುಭಗಳು, ೪೦೨ ಲಕ್ಷ ರೂಪಾಯಿಗಳನ್ನು ಸಹಾಯಧನ ರೂಪದಲ್ಲಿ ಪಡೆದಿದ್ದಾರೆ. ೪೦೨ ಲಕ್ಷ ರೂಪಾಯಿ ಬೀಜ ಧನದ ರೂಪದಲ್ಲಿ ೮೦೪ ಲಕ್ಷ ರೂಪಾಯಿಗಳನ್ನು ಬ್ಯಾಂಕ್‌ನಿಂದ ಒಟ್ಟು ೨೯,೩೮೮ ಫಲಾನುಭವಿಗಳು ಸಹಾಯವನ್ನು ಹೊಂದಿದ್ದಾರೆ. ಮಾನ್ಯ ಸದಸ್ಯರು ಹೇಳಿದರು ಅರ್ಜಿ ಹೋದಾಗ ಬ್ಯಾಂಕ್‌ನವರು ತಿರಸ್ಕಾರ ಮಾಡುತ್ತಾರೆ, ಎಂದು. ಇಲ್ಲಿ ಕೆಲವು ಯೋಜನೆಗಳು ಇವೆ, ಅವು ಕ್ರಮಬದ್ಧವಾಗಿ ಇರುತ್ತವೆ, ಕೆಲವೊಂದು ಕ್ರೈಟೀರಿಯಾಗಳು ಇರುತ್ತವೆ. ಕೆಲವು ಕ್ರೈಟೀರಿಯಾ ಕ್ರಮಬದ್ಧತೆ ಬಗ್ಗೆ ಕೆಲವು ರಿಜೆಕ್ಟ್ ಆಗಿರಬಹುದು, ಅವರು ಹೇಳುವಂತೆ ೯೦ ಪರ್ಸೆಂಟ್ ಆಗಿವೆ ಎಂದರೆ ಅದು ಸತ್ಯಕ್ಕೆ ದೂರವಾದುದು. ಯಾವ ಯಾವ ಉದ್ಯೋಗಗಳಿಗೆ ಸಹಾಯವನ್ನು ಮಾಡಲಾಗಿದೆ ಎಂದು ಕೇಳಿದ್ದಾರೆ. ಭೂಮಿ ಅಭಿವೃದ್ಧಿ ನೀರಾವರಿ ಪಂಪು ಸೆಟ್ಟು, ಹೈನುಗಾರಿಕೆ, ತೋಟಗಾರಿಕೆ, ರೇಷ್ಮೆ, ಮರದ ಕೆಲಸ, ಚರ್ಮಗಾರಿಕೆ, ಕಾಫಿ ತೋಟ, ಹಗ್ಗದ ತಯಾರಿಕೆ, ಹೊಲಿಗೆ ಯಂತ್ರ, ಆಟೋರಿಕ್ಷಾ ಇತ್ಯಾದಿಗಳಿಗೆ ಸಹಾಯ ನೀಡಲಾಗುತ್ತಿದೆ.

ಶ್ರೀ ಎಂ. ಶಿವಣ್ಣ.—ಮಾನ್ಯ ಅಧ್ಯಕ್ಷರೇ, ನಮ್ಮಲ್ಲಿ ಯೋಜನೆಗಳೇನೋ ಸಾವಿರಾರು ಇವೆ. ಆದರೆ ಎಷ್ಟರಮಟ್ಟಿಗೆ ಆ ಯೋಜನೆಗಳು ಕಾರ್ಯಗತವಾಗುತ್ತಿವೆ ಎನ್ನತಕ್ಕಂಥದ್ದು ಎಲ್ಲರಿಗೂ ತಿಳಿದಿರತಕ್ಕಂಥ ವಿಚಾರ. ಈ ನಿಗಮದ ನೂರೆಂಟು ಕಾರ್ಯಕ್ರಮಗಳನ್ನು ಮಾನ್ಯ ಸಚಿವರು ಹೇಳಿದ್ದಾರೆ. ಆದರೆ ಅವು ಫಲಕಾರಿಯಾಗುತ್ತಿವೆಯೇ ಎಂಬುದು ನನಗೆ ಬಂದಿರತಕ್ಕಂಥ ಸಂಶಯ. ಇಲ್ಲಿ ಒಂದು ಉದಾಹರಣೆಯನ್ನು ತಮಗೆ ಕೊಡುತ್ತೇನೆ. ಈ ಒಂದು ನಿಗಮದಿಂದ ಆಟೋರಿಕ್ಷಾ ತರಬೇತಿ ಪಡೆದಂಥವರು ಆಟೋರಿಕ್ಷಾಗಳನ್ನು ತೆಗೆದ ಕೊಳ್ಳಬೇಕಾಗುತ್ತದೆ ಎಂದು ಹೇಳಿದ್ದಾರೆ. ಈ ರೀತಿ ತರಬೇತಿಯನ್ನು ಪಡೆದವರಿಗೆ ಶೇಕಡ ೨೫ ರಷ್ಟು ಹಣವನ್ನು ಕೊಡುತ್ತೇವೆ ಎಂದು ಹೇಳುತ್ತೀರಿ. ಆದರೆ ಇಲ್ಲಿ ನಾನು ಹೇಳತಕ್ಕಂಥದ್ದು ಇಷ್ಟೆ. ತಮ್ಮ ಮೂಲಕ ಆಟೋ ತರಬೇತಿಯನ್ನು ಪಡೆದಂಥವರಿಗೆ ಪೂರ್ಣ ಅವಧಿ ಸಾಲವನ್ನು ನಿಗಮದಿಂದ ಕೊಟ್ಟು ಅವರಂ ಪೂರ್ಣ ಉದ್ಯೋಗ ಮಾಡುವಂಥ ವ್ಯವಸ್ಥೆಯನ್ನು ಮಾಡಿಕೊಡಬೇಕು. ಆಗ ಅವರಿಗೇ ಒಂದು ಸಹಾಯವಾದಂತಾಗುತ್ತದೆ ಮತ್ತು ಅವರೇ ಈ ಆಟೋವನ್ನು ಸ್ವಶಕ್ತಿಯಿಂದ ಪಡೆಯಬೇಕು ಎಂದು ಹೇಳಿದರೆ ಅವರು ಪಡೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಇದೇ ರೀತಿಯಲ್ಲಿ ಕೈಗಾರಿಕೆಯಾಗಲೀ, ತೋಟಗಾರಿಕೆಯಾಗಲೀ, ಚರ್ಮದ ಉದ್ಯೋಗವಾಗಲೀ ಪ್ರತಿಯೊಂದು ಕೂಡ ಇವುಗಳಿಗೆ ಶೇಕಡ ೨೫ ರಷ್ಟು ಹಣವನ್ನು ಒದಗಿಸಿಕೊಡುತ್ತೇವೆ ಎಂದು ಹೇಳಿದರೆ ಅದು ಕಾರ್ಯರೂಪಕ್ಕೆ ಬರುವುದಿಲ್ಲ. ಆದ್ದರಿಂದ ಈ ನಿಗಮದಿಂದ ಪೂರ್ಣ ಅವಧಿಯ ಹಣವನ್ನು ಅವರು ಯಾವುದೇ ಕೆಲಸವನ್ನು ಮಾಡಲಿ, ಒದಗಿಸಿ ಕೊಡಬೇಕೆಂದು ಹೇಳುತ್ತೇನೆ. ಅವರಿಗೆ ಈ ರೀತಿ ಪೂರ್ಣ ಅವಧಿಯ ಸಾಲವನ್ನು ನೀಡಿ ಅದನ್ನು ಹೈಪಾಥಿಕೇಟ್ ಮಾಡಿಕೊಂಡರೆ ಬಹಳ ಅನುಕೂಲವಾಗುತ್ತದೆ ಎಂದು ನಾನು ಭಾವನೆ ಮಾಡಿದ್ದೇನೆ. ಆ ರೀತಿ ಒಂದು ಕಾರ್ಯಕ್ರಮವನ್ನು ತಾವು ಹಾಕಿಕೊಳ್ಳುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ.—ಈ ನಿಗಮದಿಂದ ಕೆಲವು ತರಬೇತಿಗಳನ್ನು ಕೊಟ್ಟಿದ್ದೇವೆ. ಇದರಲ್ಲಿ ವಾಹನ ತರಬೇತಿಯೂ ಸೇರಿದೆ. ಆ ರೀತಿ ತರಬೇತಿ ಹೊಂದಿದವರಿಗೆ ಕಾರ್ ಕೊಳ್ಳುವುದಕ್ಕೆ ಆಗಲೀ, ಆಟೋರಿಕ್ಷಾ ಆಗಲೀ ಅವರಿಗೆ ತಕ್ಷಣ ಸಿಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ತಮಗೆ ತಿಳಿದಿರುವ ಹಾಗೆ ಪಾಲಿಸಿ ಪ್ರಕಾರ ಆಟೋರಿಕ್ಷಾಗಳಿಗೆ ಅವರಿಗೆ ಅಲಾಟ್‌ಮೆಂಟ್ ಸಿಕ್ಕಿದರೂ ಕೂಡಾ ಲೈಸೆನ್ಸ್ ಸಿಗುವುದು ಕಷ್ಟವಾಗುತ್ತದೆ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಸ್ವಲ್ಪ ನಿಯಮವನ್ನು ರಿಲ್ಯಾಕ್ಸ್ ಮಾಡಿ ಕೊಡಿ ಎಂದು ಮಾನ್ಯ ಸಿದ್ಧಾರವರಿಗೆ ಹೇಳಿ ದಕ್ಷಿಣ ಕನ್ನಡ ಮತ್ತು ಬೆಂಗಳೂರು ನಗರದವರಿಗೆ ಇಲ್ಲಿಗೆ ಲೈಸೆನ್ಸ್ ಮಾಡಿ ಎಂದು ಹೇಳಿರುವುದರಿಂದ ಸ್ವಲ್ಪ ಆಟೋ ದೊರಕುವ ಸಾಧ್ಯತೆ ಇದೆ. ನಮ್ಮ ಉದ್ದೇಶ ಅವರನ್ನು ವೃತ್ತಿಪರ ಶಿಕ್ಷಣಕ್ಕೆ ಒಳಪಡಿಸುವುದಕ್ಕೋಸ್ಕರ ಹಲವಾರು ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ನಾವು ಯಾವ ಉದ್ದೇಶದಿಂದ ಆ ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ, ಆ ಉದ್ದೇಶ ನೂರಕ್ಕೆ ನೂರರಷ್ಟು ಸಫಲವಾದರೆ ಇಷ್ಟೆ

ಹೊತ್ತಿಗೆ ನಮ್ಮಲ್ಲಿ ಬಡತನ ಇರುತ್ತಿರಲಿಲ್ಲ. ವಿಶೇಷ ಘಟಕ ಯೋಜನೆ ಮೂಲಕ ಪ್ರತಿ ವರ್ಷ ಲಕ್ಷಾಂತರ ಕುಟುಂಬಗಳನ್ನು ಬಡತನ ರೇಖೆಯಿಂದ ಮೇಲಕ್ಕೆ ಎತ್ತಬೇಕು ಎಂದು ನಾವು ಕಾರ್ಯ ಕ್ರಮಗಳನ್ನು ಹಾಕಿಕೊಂಡಿದ್ದೇವೆ. ಆದರೆ ದುರಾದೃಷ್ಟ ಇನ್ನೂ ೨೫ ಪರ್‌ಸೆಂಟ್ ಬಡತನ ರೇಖೆಯ ಮೇಲೆ ಏರಬೇಕಾದ್ದು ಬಹಳ ಇದೆ. ಲೋಪದೋಷಗಳು ಎಲ್ಲಾ ಮಟ್ಟದಲ್ಲೂ ಇವೆ, ಆದೇ ರೀತಿ ಬಡತನ ರೇಖೆಯಿಂದ ಬಂದಿರತಕ್ಕವರೂ ಕೂಡಾ ನಾವು ಸ್ವಾವಲಂಬಿಗಳಾಗಬೇಕು, ಇದರ ಅನುಭವನ್ನು ಪಡೆದು ಇದರಿಂದ ಮುಂದೆ ಮುಂದೆ ಬರಬೇಕು ಎಂದು ಅವರಲ್ಲೂ ಕೂಡಾ ಒಂದು ಕುತೂಹಲ ಬೇಕು. ಆ ದೃಷ್ಟಿಯಿಂದ ಆ ಕುತೂಹಲ ಅವರಲ್ಲಿ ಬರಲಿ ಎಂದು ನಿಗಮ ಮತ್ತು ಇಲಾಖೆಯವರು ಕಾಯಾ ವಾಚಾ ಮನಸಾ ಪ್ರಯತ್ನಶೀಲರಾಗಿದ್ದೇವೆ. ಯಾವ ಉದ್ದೇಶಕ್ಕೋಸ್ಕರ ಹಣ ಒದಗಿಸಿದ್ದೇವೆ, ಆ ಉದ್ದೇಶಕ್ಕೋಸ್ಕರ ಅವರಿಗೆ ಹಣ ಮುಟ್ಟುತ್ತಿದೆಯೇ ಎನ್ನುವುದರ ಬಗ್ಗೆಯೇ ನಾವು ಪ್ರಯತ್ನ ಶೀಲರಾಗಿದ್ದೇವೆ. ಅದು ಸರಿಯಾದ ರೀತಿಯಲ್ಲಿ ಮುಟ್ಟುತ್ತಿಲ್ಲ ಈ ಒಂದು ಉದ್ದೇಶ ಸಫಲಕಾರಿ ಯಾಗುತ್ತಿಲ್ಲ ಎಂದು ಹೇಳುತ್ತಿದ್ದಾರೆ, ಮಾನ್ಯ ಸದಸ್ಯರಿಗೆ ಇದರ ಬಗ್ಗೆ ಎಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ಸರ್ಕಾರಕ್ಕೂ ಇದೆ.

ಶ್ರೀ ಎಂ. ಶಿವಣ್ಣ.—ಅಧ್ಯಕ್ಷರೇ, ಇದೊಂದೇ ಪ್ರಶ್ನೆಯನ್ನು ಕೇಳಬಯಸುತ್ತೇನೆ. ನೀರಾವರಿ ವಿಶೇಷ ಘಟಕ ಯೋಜನೆಯ ಮೂಲಕ ನೀವು ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ನೀರಾವರಿ ಬಾವಿಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ತೋರಿಸಿ ಕೊಟ್ಟಿದ್ದೀರಿ. ಮತ್ತು ಯಾವ ಯಾವ ಕಂಪನಿಗಳ ಪಂಪುಗಳನ್ನು ಹಾಕಿಕೊಟ್ಟಿದ್ದೀರಿ ಎಂದು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ. ಪಂಪುಗಳನ್ನು ಹಾಕಿಕೊಡುವ ಸಂದರ್ಭದಲ್ಲಿ ನಿಗಮದಲ್ಲಿ ತಾಂತ್ರಿಕ ತಜ್ಞರು ಇದ್ದಾರೆಯೇ ಬಾವಿಗಳನ್ನು ಹಾಕತಕ್ಕಂಥ ಸಂದರ್ಭದಲ್ಲಿ ಯಾವ ಯಾವ ಕಂಪನಿಯವರು ಪೈಪ್‌ಗಳನ್ನು ಹಾಕಿದರು, ಎಷ್ಟು ಪೈಪ್‌ಗಳನ್ನು ಹಾಕಿದ್ದಾರೆ ಹೇಗೆ ಹಾಕಿದ್ದಾರೆ ? ಯಾವ ರೀತಿಯ ಪೈಪ್‌ಗಳನ್ನು ಉಪಯೋಗಿಸಿದ್ದಾರೆ, ಎಷ್ಟರವರೆಗೆ ಅಲ್ಲಿ ಕೆಲಸ ಮಾಡಿದ್ದಾರೆ, ಎಂದು ತಿಳಿದುಕೊಳ್ಳತಕ್ಕಂಥ ತಾಂತ್ರಿಕ ತಜ್ಞರು ತಮ್ಮಲ್ಲಿ ಇದ್ದಾರೆಯೇ ಬೋರ್‌ವೆಲ್‌ಗಳನ್ನು ಹಾಕತಕ್ಕಂಥ ಸಂದರ್ಭದಲ್ಲಿ ಆ ಕಂಪನಿಗಳವರು ಬೇರೆ ಸಬ್ ಸ್ಟಾಂಡರ್ಡ್ ಮೆಟೀರಿಯಲ್ಸ್‌ಗಳನ್ನು ಉಪಯೋಗಿಸಿ ಅನೇಕ ಬಾವಿಗಳು ಉಪಯೋಗಕ್ಕೆ ಬಾರದೇ ಇರುವುದು ಮತ್ತು ವಿಫಲವಾಗಿರುವುದು ಮಾನ್ಯ ಸಚಿವರ ಗಮನಕ್ಕೆ ಬಂದಿದೆಯೇ ? ಆ ಒಂದು ನ್ಯೂನತೆ ತಮ್ಮ ಗಮನಕ್ಕೆ ತಂದಿದ್ದರೆ ಅದನ್ನು ತನಿಖೆಗೆ ಒಳಪಡಿಸುತ್ತೀರಾ ಎಂದು ಕೇಳ ಬಯಸುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ —ಸನ್ಮಾನ್ಯ ಅಧ್ಯಕ್ಷರೇ, ಮೊದಲು ವಿಶೇಷ ಘಟಕ ಯೋಜನೆಯಲ್ಲಿ ಈ ಪರಿಶಿಷ್ಟ ಜಾತಿಯ ಗುಂಪುಗಳು ಸಣ್ಣ ಹಿಡುವಳಿದಾರರು ಏನು ಇದ್ದಾರೆ, ಅವರಿಗೆ ನೀರಾವರಿ ಬಾವಿಗಳನ್ನು ಒದಗಿಸಿಕೊಡುತ್ತಿದ್ದೇವೆ ಈಗ ಸರ್ಕಾರ ನೇರವಾಗಿ ನಿಮಗಕ್ಕೆ ಈ ಜವಾಬ್ದಾರಿಯನ್ನು ವಹಿಸಿದೆ. ೮೪-೮೫ರಲ್ಲಿ ಎಂಟು ಜಿಲ್ಲೆಗಳಲ್ಲಿ ನಿಗಮದಿಂದ ಬೋರ್‌ವೆಲ್ ತೆಗೆದು ಪಂಪ್‌ಸೆಟ್‌ನ್ನು ಅಳವಡಿಸಿ ನೀರಾವರಿ ಸೌಲಭ್ಯವನ್ನು ಒದಗಿಸತಕ್ಕಂಥ ಕಾರ್ಯಕ್ರಮ ಬಹಳ ಪರಿಣಾಮಕಾರಿಯಾದ ಕಾರ್ಯಕ್ರಮ. ಎಂಟು ಜಿಲ್ಲೆಗಳು ಎಂದರೆ ಚಿತ್ರದುರ್ಗ, ಮೈಸೂರು, ಬಿಜಾಪುರ, ಕೋಲಾರ, ಹಾಸನ ಬೆಳಗಾಂ, ಗುಲ್ಬರ್ಗ ಮತ್ತು ಶಿವಮೊಗ್ಗ. ಮತ್ತೆ ಈ ಸಾರಿ ನಾಲ್ಕು ಜಿಲ್ಲೆಗಳಿಗೆ ಇದನ್ನು ವಿಸ್ತರಿಸಬೇಕು ಎಂದು ನಾವು ಮಾಡಿದ್ದೇವೆ. ಇಲ್ಲಿಯವರೆಗೆ ಈ ನಿಗಮದಿಂದ ತೆಗೆದ ಬಾವಿಗಳು ೨೪೭೧ ಇದರಲ್ಲಿ ೨೩೭೫ ಬಾವಿಗಳು ಫಲಪ್ರದವಾಗಿವೆ. ೧೬೧೬ ಬಾವಿಗಳಿಗೆ ವಿದ್ಯುದ್ದೀಕರಣವಾಗಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಕೊಳವೆ ಬಾವಿಗಳಿಗೆ ಪಂಪ್‌ಸೆಟ್‌ನ್ನು ಅಳವಡಿಸುವುದರಿಂದ ಇದರಿಂದ ಅಷ್ಟು ಕಂಪ್ಲೇಂಟ್ ಬಂದಿಲ್ಲ. ವಿದ್ಯುದ್ದೀಕರಣದ ಬಗ್ಗೆ ಬಹಳ ವಿಳಂಬವಾಗುತ್ತಿದೆ ಎಂದು ನನ್ನ ಗಮನಕ್ಕೆ ಬಂದಿದೆ. ಇದನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಎಂದರೆ ಶ್ರೀ ರುದ್ರಪ್ಪನವರಿಗೆ ತಿಳಿಸಿ, ವಿಶೇಷ ಘಟಕ ಯೋಜನೆಗೆ ಹಣ ಒದಗಿಸಿದ್ದೇವೆ.

ಅಲ್ಲದೆ ಈ ಕಾಮಗಾರಿಗಳಿಗೆ ಮೋಟರಿಯಲ್ಸ್ ಇಲ್ಲವೆಂದು ಕೆಲಸವನ್ನು ನಿಧಾನ ಮಾಡುತ್ತಿದ್ದಾರೆ. ವಿಶೇಷವಾಗಿ ಆದಷ್ಟು ಬೇಗ ಆದ್ಯತೆಯನ್ನು ಇದರ ಬಗ್ಗೆ ಕೊಡಲಾಗುವುದು. ಹಾಗೂ ಅಧಿಕಾರಿಗಳನ್ನು ಕರೆದು ಟೆಂಡರ್ ಮಾಡಿ, ಬೋರ್ ವೆಲ್ ಹಾಕುವ ಬಗ್ಗೆ ಕಿಟ್ಟರುವ ಬೋರ್ ವೆಲ್‌ಗಳನ್ನು ಸರಿ ಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀಮತಿ ಸುಮಾ ವಸಂತ್.—ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಬಗ್ಗೆ ಹಲವಾರು ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅವರುಗಳಿಗೆ ಟೈಲರಿಂಗ್ ಕೊಡುವುದಕ್ಕೆ ಬಟ್ಟೆ ಹೊಲಿಗೆ ಯಂತ್ರವನ್ನು ಮಾತ್ರ ಕೊಟ್ಟು ಬಟ್ಟೆ ಹೊಲೆಯುವುದಕ್ಕೆ ಟೈಲರಿಂಗ್ ಕೊಡುತ್ತಾರೆ. ನಂತರ ಇವರಿಗೆ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ಬಿದಿರನ್ನು ಸಪ್ಲೈ ಮಾಡುವುದಿಲ್ಲ. ಇದಕ್ಕೆ ಏನಾದರೂ ಕಾರ್ಯಕ್ರಮ ಹಾಕಿಕೊಂಡಿದ್ದೀರಾ ? ಪರಿಶಿಷ್ಟ ಜಾತಿ ಮತ್ತು ಪಂಡಗಳ ಅಭಿವೃದ್ಧಿಯ ಬಗ್ಗೆ ವಿಶೇಷವಾಗಿ ಅವರಿಗೆ ಸಹಾಯಧನ ಮತ್ತು ಬೀಜ ಧನ ಕೊಡುವಂತಹ ಸಾಧ್ಯತೆ ಇದೆಯೇ ಎಂದು ತಿಳಿಸಬೇಕು.

ಶ್ರೀ ಜಿ. ಬಸವಣ್ಣಪ್ಪ.—ಇದರ ಬಗ್ಗೆ ನಿಗಮ ಹೊಸದಾಗಿ ಒಂದು ಕಾರ್ಯಕ್ರಮವನ್ನು ರೂಪಿಸಿದೆ. ಅದಕ್ಕೆ ೭೭–೭೮ರಲ್ಲಿ ೧.೨೫.೦೦೦ ಸಾವಿರ ರೂಪಾಯಿಗಳನ್ನು ಒದಗಿಸಿಕೊಟ್ಟಿದ್ದೇವೆ. ಈ ಕಾರ್ಯಕ್ರಮ ಇನ್ನೂ ಕಾನೂನು ಆಗಿ ಆ ಮೂಲಕ ಜಾರಿಗೆ ಬಂದಿಲ್ಲ. ಇದರ ಉದ್ದೇಶ to impart training for women and youths ಇನ್ನು House keeping, nursing training ಇದರ ಬಗ್ಗೆ ಹೇಳುವುದಾದರೆ ಹೆಣ್ಣು ಮಕ್ಕಳು ಮುಂದೆ ಬರುವುದಕ್ಕೆ ಹೆಚ್ಚು ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ. ಆದಷ್ಟು ಬೇಗ ಈ ಕಾರ್ಯಕ್ರಮ ಜಾರಿಗೆ ಬರುತ್ತದೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ದುರ್ಬಲ ವರ್ಗದವರಿಗೆ ಬಾವಿಗಳನ್ನು ತೋಡುವ ಕಾರ್ಯಕ್ರಮ ಇದೆ ಎಂದು ಹೇಳಿದ್ದಾರೆ. ಕೋಲಾರ ಮತ್ತು ಬೆಂಗಳೂರು ಜಿಲ್ಲೆಯನ್ನು ಡಾರ್ಕ್ ಮತ್ತು ಗ್ರೇ ಏರಿಯಾ ಎಂದು ಪರಿಗಣಿಸಿ ಕಾರ್ಪೊರೇಷನ್‌ನವರು ಪರ್ಮಿಷನ್ ಕೊಡುತ್ತಿಲ್ಲ. ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟ್‌ನವರು ಡಾರ್ಕ್ ಮತ್ತು ಗ್ರೇ ಏರಿಯಾ ಎಂದು ಡಿಕ್ಲೇರ್ ಮಾಡಿರುವ ಪ್ರದೇಶದಲ್ಲಿ, ಗಂಗಾ ಕಲ್ಯಾಣ ಯೋಜನೆಯನ್ನು ಹಾಕುವುದಕ್ಕೆ ಸಾಧ್ಯವಾಗುವುದಿಲ್ಲ. ಆದೇ ರೀತಿ ನಮ್ಮ ಕಾರ್ಪೊರೇಷನ್‌ನವರು ರೂಪಿಸಿರುವ ಈ ಸ್ಕೀಮ್ ಡಾರ್ಕ್ ಅಂಡ್ ಗ್ರೇ, ಏರಿಯಾ, ಇದಕ್ಕೆ ದಯವಿಟ್ಟು ಎಕ್ಸೆಂಪ್‌ಷನ್ ಕೊಟ್ಟರೆ ಕೋಲಾರ ಮತ್ತು ಬೆಂಗಳೂರು ಜಿಲ್ಲೆಯಲ್ಲಿರುವ ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಅನುಕೂಲವಾಗುತ್ತದೆ. ಈ ಬಗ್ಗೆ ಮಾನ್ಯ ಸಚಿವರು ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.—ಇದರ ಬಗ್ಗೆ ಗಮನ ಹರಿಸಿ ಇದನ್ನು ಪರಿಶೀಲನೆ ಮಾಡುತ್ತೇನೆ.

## ಮೈಸೂರು ಚಾಮುಂಡಿ ಬೆಟ್ಟದ ದೇವಸ್ಥಾನದಲ್ಲಿ ಕೆಲಸ ಮಾಡುತ್ತಿರುವ ನೌಕರರ ಬಗ್ಗೆ

೧೫೪೬. ಶ್ರೀ ವೇದಾಂತ ಹೆಬ್ಬಿಗೆ (ಕೃಷ್ಣ ರಾಜ).—ಮಾನ್ಯ ಧಾರ್ಮಿಕ ದತ್ತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ಚಾಮುಂಡಿ ಬೆಟ್ಟದ ದೇವಸ್ಥಾನದಲ್ಲಿ ಕೆಲಸ ಮಾಡುತ್ತಿರುವ ನೌಕರರ ಸಂಖ್ಯೆ ಎಷ್ಟು, ಈ ಪೈಕಿ – ಹಂಗಾಮಿ ಎಷ್ಟು ? ಖಾಯಂ ಎಷ್ಟು ?

ಆ) ಸದರೀ ದೇವಸ್ಥಾನದಲ್ಲಿ ಹಂಗಾಮಿ ಮತ್ತು ಖಾಯಂ ನೌಕರರ ವೇತನ ಶ್ರೇಣಿ ಎಷ್ಟು ?

ಇ) ಚಾಮುಂಡಿ ಬೆಟ್ಟದಲ್ಲಿ ಪ್ರತಿ ವರ್ಷವು ಸಾರ್ವಜನಿಕರಿಂದ ಬರುತ್ತಿರುವ ಆದಾಯವೆಷ್ಟು?

ಶ್ರೀ ಕೆ. ಅಮರನಾಥ ಶೆಟ್ಟಿ (ಧಾರ್ಮಿಕ ಮತ್ತು ದತ್ತಿ ರಾಜ್ಯ ಮಂತ್ರಿಗಳು).—

ಅ) ೯೫ ನೌಕರರು.

೨ ಸರ್ಕಾರಿ ನೌಕರರು.

೯೩ ಪೂರ್ಣಾವಧಿ ಹಂಗಾಮಿ ನೌಕರರು.